ಬರುವಷ್ಟರಲ್ಲಿ ಮನೆಯನ್ನು ಶುಚಿಗೊಳಿಸಿಯೇಬಿಟ್ಟ! ಅವನ ಈ 'ಸ್ಮಾರ್ಟ್‌ವರ್ಕ್' ಕಾರ್ಯವಿಧಾನಕ್ಕೆ ಮನದಲ್ಲೇ ತಲೆದೂಗುತ್ತಿದ್ದ ನನಗೆ, ಅತಿಥಿ ಶಿಶುವು ಆಟವಾಡುತ್ತಿದ್ದ ಪುಟ್ಟ ರಿಮೋಟ್ ಕಾರು ಸೋಫಾ ಅಡಿಯಲ್ಲಿ ಸಿಕ್ಕಿಹಾಕಿಕೊಂಡಾಗ ಫಜೀತಿಗಿಟ್ಟುಕೊಂಡಿತು. ಇನ್ನೆಲ್ಲಿ ಅದನ್ನು ಮುಂದಕ್ಕೆ ಎಳೆದು ನಮ್ಮ ಬಂಡವಾಳ ಬಯಲಾಗುತ್ತದೋ ಎಂದುಕೊಳ್ಳುವಾಗ ನಮ್ಮ ಸ್ಮಾರ್ಟ್ ಹೀರೋ ಮಗರಾಯ ಮತ್ತೊಂದು ಮಗುವಿನ ಬಳಿಯಿದ್ದ ಚೆಂಡನ್ನು ಕಾರಿನತ್ತ ಗುರಿಯಿಟ್ಟು ರಭಸವಾಗಿ ಒದ್ದು ಕಾರನ್ನು ಹೊರದೂಡುವಲ್ಲಿ ಯಶಸ್ವಿಯಾಗಿದ್ದ! ಹಾಗಾದರೆ ಸ್ಮಾರ್ಟ್‌ವರ್ಕ್ ಅಂದರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸದೇ ತುರ್ತು ಪರಿಸ್ಥಿತಿಗಳಲ್ಲಿ ಅನುಕೂಲ ಸಿಂಧುವಾಗಿ ತತ್‌ಕ್ಷಣವೇ ನೆರವೇರಿಸಿಬಿಡುವುದೇ?

ಸ್ವಲ್ಪ ಪೂರ್ವಗ್ರಹ ಪೀಡಿತಳಾಗುವುದನ್ನು ಬಿಟ್ಟು ಆಲೋಚಿಸಿ, ಅತ್ತಿತ್ತ ಕತ್ತು ಹಾಯಿಸಿದಾಗ ತಿಳಿದದ್ದು ಸ್ಮಾರ್ಟ್‌ವರ್ಕ್ ಎಂದರೆ ಕಡಿಮೆ ಶ್ರಮದಲ್ಲಿ ಹೆಚ್ಚು ಫಲ ಪಡೆಯುವುದು ಎಂದು. ಒಂದೇ ಕೆಲಸವನ್ನು ಹತ್ತು ಗಂಟೆ ಮಾಡಿದರೆ ಹಾರ್ಡ್‌ವರ್ಕ್, ಅದೇ ಕೆಲಸವನ್ನು ಒಂದು ಗಂಟೆಯಲ್ಲಿ ಮುಗಿಸಿದರೆ ಸ್ಮಾರ್ಟ್‌ವರ್ಕ್! ಬೆವರು ಸುರಿಸುವುದನ್ನು ಕಡಿಮೆ ಮಾಡಿ ಹೆಚ್ಚು ಬುದ್ಧಿಯನ್ನು ಬಳಸಿ! ಹಿಂದಿನ ಕಾಲದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ದುಡಿಯುತ್ತಿದ್ದುದು ಅನಿವಾರ್ಯವಾಗಿತ್ತು. ಈಗ ಏನಿದ್ರೂ ಒಂದು ಕ್ಲಿಕ್, ಒಂದು ಆ್ಯಪ್, ಒಂದು ಶಾರ್ಟ್‌ಕಟ್! ಆಹಾ, ಬದುಕ ಸರಳೀಕರಣವೇ!

ಪರೀಕ್ಷೆಗೆ ಮುನ್ನಾ ಸ್ಟಡಿ ಹಾಲಿಡೇಸ್‌ಗಳಲ್ಲಿ ಓದುತ್ತಿದ್ದಾಗ ನಮ್ಮ ಹಾಸ್ಟೆಲ್‌ನಲ್ಲಿ ರಾತ್ರಿ 10ಕ್ಕೆ ಟೀ ಕೊಡುತ್ತಿದ್ದರು. ಯಾವುಯಾವುದೋ ವಿಂಗ್‌ಗಳಲ್ಲಿ ನನ್ನಂಥಾ ಶ್ರಮಜೀವಿಗಳೆಲ್ಲರೂ ನಡೆಯುತ್ತಾ, ಕುಳಿತು, ನೆಲದ ಮೇಲೇ ಮಲಗಿ ಚೆಲ್ಲಾಡುತ್ತಾ ಹಗಲುರಾತ್ರಿ ಎನ್ನದೇ ಒಂದೇ ಸಮನೆ ಓದುತ್ತಿದ್ದೆವು. ನನಗೋ ಪರೀಕ್ಷೆ ಹತ್ತಿರವಾದಂತೆ ನಿದ್ದೆಯೂ ಜಾಸ್ತಿ. ಅಲ್ಲೇ ಓದುತ್ತಿದ್ದ ನಮ್ಮಕ್ಕ, ಯಾವುದಾದರೂ ಮೂಲೆಯಲ್ಲಿ ಮುದುರಿಕೊಂಡು ನಿದ್ದೆ ಹೋಗಿರುತ್ತಿದ್ದ ನನ್ನನ್ನು ಟೀ ಬೆಲ್ ಆದ ತಕ್ಷಣ ಹುಡುಕಿಕೊಂಡು ಬಂದು ಎಷ್ಟೇ ಎಳೆದಾಡಿದರೂ ಏಳದಿದ್ದಾಗ ನಾನು ತುಂಬಾ ಹೆದರುತ್ತಿದ್ದ ಸುಮಾರು ಆರು ಅಡಿ ಎತ್ತರವಿದ್ದ ನನ್ನದೇ ಕ್ಲಾಸ್‌ಮೇಟ್ ಅನ್ನು ಕರೆ ತರುತ್ತಿದ್ದಳು. ಅವಳು ಒಮ್ಮೆ 'ಮಣಿ... ಗೆಟ್‌ಅಪ್' ಎಂದು ಅಬ್ಬರಿಸಿದ ತಕ್ಷಣ ನಾನು ದಡಬಡಾಯಿಸಿ ಎದ್ದು ಬಿಡುತ್ತಿದ್ದುದೇ ಎಲ್ಲರಿಗೂ ಜೋಕ್ ಆಗಿತ್ತು. ಅಂಥಾ ಹಾರ್ಡ್‌ವರ್ಕ್‌ಗಳ ನಡುವೆ ಕೆಲವು ಗುಂಪುಗಳಲ್ಲಿ ಗ್ರೂಪ್ ಸ್ಟಡಿಯೂ ನಡೆಯುತ್ತಿದ್ದು ಒಬ್ಬರು ಜೋರಾಗಿ ಓದುತ್ತಿದ್ದುದನ್ನು ನಾಲ್ಕಾರು ಜನ ಸುತ್ತಾ ಕೇಳುತ್ತಾ ಮಲಗಿರುತ್ತಿದ್ದರು. ರಿಸಲ್ಟ್ ಬಂದಾಗ ಓದುತ್ತಿದ್ದವರಿಗಿಂತ ಕೇಳುತ್ತಿದ್ದವರಿಗೇ ಹೆಚ್ಚು ಮಾರ್ಕ್ಸ್ ಬರುತ್ತಿದ್ದುದು ಸೋಜಿಗವೆನಿಸುತ್ತಿತ್ತು. ಆಹಾ...! ಸ್ಮಾರ್ಟ್‌ವರ್ಕ್ ಪ್ರಭಾವವೇ!

ನಿವೃತ್ತಿಯ ಸಮೀಪದ ವರ್ಷಗಳಲ್ಲಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಕೆಲವರು ಇಡೀ ದಿನ ಫೈಲ್ ಹಿಡಿದು ಓಡಾಡುತ್ತಾ ಊಟ, ಕಾಫಿಗೂ ಹೋಗದೇ ಫೈಲ್ಗಳೊಳಗೇ ತಲೆ ಹುದುಗಿಸಿಕೊಂಡು ಕೆಲಸ ಮಾಡುತ್ತಿದ್ದು ಒಳ್ಳೇ ಕೆಲಸಗಾರನೆಂಬ ಹೆಸರು ಪಡೆದಿದ್ದರು. ಆದರೆ ನಂತರ ಕಂಪ್ಯೂಟರ್ ಕಲಿತವರು ಓಡಾಡಿಕೊಂಡೇ ಒಂದೆರಡು ತಾಸಿನಲ್ಲೇ ಕೆಲಸ ಮುಗಿಸಿ ಮೇಲ್ ಮಾಡಿ ಬಾಸ್‌ಗೆ ಆಪ್ತರಾಗಿ ಬಿಡಲಾರಂಭಿಸಿದರು!

ನಾವು ಯಾವುದಾದರೂ ದೊಡ್ಡ ನಗರಕ್ಕೆ ಹೋದಾಗ ಮೊದಲೆಲ್ಲಾ ಹೆಜ್ಜೆಹೆಜ್ಜೆಗೂ ಕಾರು ನಿಲ್ಲಿಸಿ, 'ದಾರಿ ಯಾವುದಯ್ಯಾ...' ಎಂದು ಕೇಳುವುದೇ ಆಗುತ್ತಿತ್ತು. ಈಗಾದರೆ ಜಿಪಿಎಸ್ ಬಂದ ನಂತರ ಲೊಕೇಷನ್ ಕಳಿಸಿದರೆ ಸಾಕು, ಎಲ್ಲೆಂದರಲ್ಲಿಗೆ ಸಲೀಸಾಗಿ ಹೋಗಿ ಬಿಡಬಹುದು. ಲೊಕೇಷನ್ ಸರಿಯಾಗಿರಬೇಕು ಅಷ್ಟೇ!

ಇತ್ತೀಚೆಗಂತೂ ಕಣ್ತೆರೆದು ನೋಡಿದಾಗ ಇಂಥಾ ಹಲವಾರು ಸ್ಮಾರ್ಟ್‌ವರ್ಕ್‌ಗಳ ಮಹಾಪೂರವೇ ಸುತ್ತಾಮುತ್ತಾ ಗೋಚರಿಸುತ್ತದೆ. ಇದೇನು ಈ ಕಾಲಕ್ಕೇ ಸೀಮಿತವಲ್ಲ. ಪುರಾಣಗಳಲ್ಲೂ ಸ್ಮಾರ್ಟ್ ವರ್ಕ್‌ಗಳನ್ನು ಗಮನಿಸಬಹುದು. ಬಾಲಕೃಷ್ಣನು ಬೆಣ್ಣೆ ತಿನ್ನಲು ಹಾರ್ಡ್‌ವರ್ಕ್ ಮಾಡಿದ್ದರೆ ದಿನವೂ ಮನೆ ಮನೆಗೆ ಹೋಗಿ ಬೆಣ್ಣೆಗಾಗಿ ಕಾಡಿಬೇಡಿ ಕೊಟ್ಟರಷ್ಟೇ, ಕೊಟ್ಟಷ್ಟೇ ತಿನ್ನಬೇಕಾಗುತ್ತಿತ್ತು. ಆದರೆ ಅವನು ಗೆಳೆಯರ ಗುಂಪನ್ನು ಕಟ್ಟಿಕೊಂಡು ಬೆಣ್ಣೆಯನ್ನು